**KAKP200007422025**

# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಷ್ಟಗಿ.

ದಿನಾಂಕ **01** ನೇ ಆಗಸ್ಟ್-**2026**

**- ಉಪಸ್ಥಿತರು -**

ಶ್ರೀ ಮಹಾಂತೇಶ ಚೌಲಗಿ., ಬಿ.ಎ., ಎಲ್.ಎಲ್.ಬಿ
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ಕುಷ್ಟಗಿ

ಮೂಲ ದಾವೆ ಸಂಖ್ಯೆ: **126/2025**

| | | |
|---|---|---|
| ವಾದಿಯರು | **1.** | ಶ್ರೀಮತಿ.ಶರಣಮ್ಮ ಗಂಡ ಶರಣಪ್ಪ ಬನ್ನಿಗೋಳ, ವಯಸ್ಸು:70 ವರ್ಷ, ವೃತ್ತಿ:ಒಕ್ಕಲುತನ, ವಾಸ:ತೋಪಲಕಟ್ಟಿ, ತಾ:ಕುಷ್ಟಗಿ, ಜಿ:ಕೊಪ್ಪಳ. |
| | **2.** | ಶ್ರೀ.ಬಸವರಾಜ ತಂದೆ ಶರಣಪ್ಪ ಬನ್ನಿಗೋಳ, ವಯಸ್ಸು:49 ವರ್ಷ, ವೃತ್ತಿ:ಒಕ್ಕಲುತನ, ವಾಸ:ತೋಪಲಕಟ್ಟಿ, ತಾ:ಕುಷ್ಟಗಿ, ಜಿ:ಕೊಪ್ಪಳ. |
| | **3.** | ಶ್ರೀಮತಿ.ಶಾರದಮ್ಮ ಗಂಡ ಬಸವರಾಜ ಬನ್ನಿಗೋಳ, ವಯಸ್ಸು:45 ವರ್ಷ, ವೃತ್ತಿ:ಒಕ್ಕಲುತನ, ವಾಸ:ತೋಪಲಕಟ್ಟಿ, ತಾ:ಕುಷ್ಟಗಿ, ಜಿ:ಕೊಪ್ಪಳ. |
| | **4.** | ಶ್ರೀಮತಿ.ಮಲ್ಲವ್ವ ಗಂಡ ದೊಡ್ಡಬಸಪ್ಪ ಗಂಗಾವತಿ, ವಯಸ್ಸು:27 ವರ್ಷ, ವೃತ್ತಿ:ಒಕ್ಕಲುತನ, ವಾಸ:ಸುಳೇಕಲ್ಲ, ತಾ:ಕನಕಗಿರಿ, ಜಿ:ಕೊಪ್ಪಳ. |
| | **5.** | ಶ್ರೀಮತಿ.ರೇಖಾ ಗಂಡ ಶರಣಪ್ಪ ಕೋಳೂರ, ವಯಸ್ಸು:24 ವರ್ಷ, ವೃತ್ತಿ:ಕೂಲಿ, ವಾಸ:ಗಿಣಿಗೇರಾ, ತಾ:ಕೊಪ್ಪಳ, ಜಿ:ಕೊಪ್ಪಳ. |
| | **6.** | ಶ್ರೀಮತಿ.ಶಾಂತಾ ಗಂಡ ಅಮರೇಶ ಪುರ್ತಗೇರಿ, ವಯಸ್ಸು:23 ವರ್ಷ, ವೃತ್ತಿ:ಕೂಲಿ, ವಾಸ:ತೋಪಲಕಟ್ಟಿ, ತಾ:ಕುಷ್ಟಗಿ, ಜಿ:ಕೊಪ್ಪಳ. |

| | | |
|---|---|---|
| | **7.** | ಐಶ್ವರ್ಯ ತಂದೆ ಬಸವರಾಜ ಬನ್ನಿಗೋಳ, ವಯಸ್ಸು:20 ವರ್ಷ, ವೃತ್ತಿ:ಕೂಲಿ, ವಾಸ:ತೋಪಲಕಟ್ಟಿ, ತಾ:ಕುಷ್ಟಗಿ, ಜಿ:ಕೊಪ್ಪಳ. |

(ವಾದಿಯರ ಪರವಾಗಿ: ಶ್ರೀ.ಎಂ.ಡಿ., ವಕೀಲರು)

ವಿರುದ್ಧ

| | | |
|---|---|---|
| ಪ್ರತಿವಾದಿಯರು | **1.** | ಶ್ರೀಮತಿ.ಮಲಿಯವ್ವ ಗಂಡ ಗುರಪ್ಪ ಉಪ್ಪನಾಳ, ವಯಸ್ಸು:36 ವರ್ಷ, ವೃತ್ತಿ:ಕೂಲಿ, ವಾಸ:ತೋಪಲಕಟ್ಟಿ, ತಾ:ಕುಷ್ಟಗಿ, ಜಿ:ಕೊಪ್ಪಳ. |
| | **2.** | ಶ್ರೀಮತಿ.ಪಾರ್ವತೆವ್ವ ಗಂಡ ಬಸವರಾಜ ವಾಲಿಕಾರ, ವಯಸ್ಸು:20 ವರ್ಷ, ವೃತ್ತಿ:ಕೂಲಿ, ವಾಸ:ತೋಪಲಕಟ್ಟಿ, ತಾ:ಕುಷ್ಟಗಿ, ಜಿ:ಕೊಪ್ಪಳ. |

(ಪ್ರತಿವಾದಿಯರ ಪರವಾಗಿ:ಶ್ರೀ.ಎಸ್.ಎನ್.ಕೆ.,ವಕೀಲರು)

| | | | | |
|---|---|---|---|---|
| ದಾವೆಯನ್ನು ಹೂಡಿದ ದಿನಾಂಕ | | 20.02.2025 | | |
| ದಾವೆಯ ಸ್ವರೂಪ | | ಶಾಶ್ವತ ತಡೆಯಾಜ್ಞೆ ಕೋರಿ. | | |
| ಸಾಕ್ಷಿಗಳನ್ನು ವಿಚಾರಣೆ ಮಾಡಲು ಪ್ರಾರಂಭಿಸಿದ ದಿನಾಂಕ | | 02.07.2026 | | |
| ತೀರ್ಪನ್ನು ಉಚ್ಛರಿಸಿದ ದಿನಾಂಕ | | 02.04.2026 | | |
| ಒಟ್ಟು ಅವಧಿ | | ವರ್ಷ/ಗಳು | ತಿಂಗಳು/ಗಳು | ದಿನ/ಗಳು |
| | | **01** | **05** | **12** |

## <u>ತೀರ್ಪು</u>

ವಾದಿಯರು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿನ ತನ್ನ ಸ್ವಾಧೀನಕ್ಕೆ ಅಡ್ಡಿ ಆತಂಕ ಉಂಟು ಮಾಡದಂತೆ ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಈ ದಾವೆಯನ್ನು ಸಲ್ಲಿಸಿದ್ದು ಇರುತ್ತದೆ.

## ದಾವಾ ಅನುಸೂಚಿ/ಶೆಡ್ಯೂಲ್

| ಅ.ನಂ | ಸ.ನಂ. | ಒಟ್ಟು ವಿಸ್ತೀರ್ಣ | ಗ್ರಾಮ |
|---|---|---|---|
| **1** | **53*** ಹಿಸ್ಸಾ**-1** | **08** ಎಕರೆ **36** ಗುಂಟೆ | ತೋಪಕಟ್ಟಿ |

**2.** ವಾದ ಪತ್ರದ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆಃ

ಕುಷ್ಟಗಿ ತಾಲೂಕು ಹನಮಸಾಗರ ಹೋಬಳಿಯ ತೋಪಲಕಟ್ಟಿ ಗ್ರಾಮದ ದಾವಾ ಆಸ್ತಿ ಸರ್ವೆ ನಂ.53* ಹಿಸ್ಸಾ-1 ವಿಸ್ತೀರ್ಣ 08 ಎಕರೆ 36 ಗುಂಟೆ ಜಮೀನಿಗೆ ವಾದಿಯರು ಮಾಲಿಕರಾಗಿದ್ದು, ದಾವಾ ಆಸ್ತಿಯು ವಾದಿಯರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಅಂದಿನಿಂದ ಇಂದಿನವರಗೂ ವಾದಿಯರ **1** ಮತ್ತು **2** ನೇ ವಾದಿಯರ ಹೆಸರಿನಲ್ಲಿ ಮುಂದುವರೆದಿರುತ್ತದೆ ಮತ್ತು ವಾದಿಯರು ಯಾರದು ತಂಟೆ ತಕರಾರು ಇಲ್ಲದೇ ವಹಿವಾಟು ಮಾಡುತ್ತಾ ಬಂದಿದ್ದು ಇರುತ್ತದೆ**. 1** ಮತ್ತು **2** ನೇ ವಾದಿಯರು ಇನ್ನುಳಿದ ವಾದಿಯರ ಪರಸ್ಪರ ಒಪ್ಪಿಗೆಯ ಮೇರೆಗೆ ಸದರಿ ದಾವಾ ಆಸ್ತಿಯಲ್ಲಿ **1** ನೇ ಪ್ರತಿವಾದಿಗೆ ಪೂರ್ವ-ಪಶ್ಚಿಮ 80 ಅಡಿ ಮತ್ತು ಉತ್ತರ-ದಕ್ಷಿಣ ದಿಕ್ಕಿನ ಕಡೆಗೆ 65 ಅಡಿ ಜಮೀನನ್ನು ಮತ್ತು **2** ನೇ ಪ್ರತಿವಾದಿಗೆ ಪೂರ್ವ-ಪಶ್ಚಿಮ 40 ಅಡಿ ಮತ್ತು ಉತ್ತರ-ದಕ್ಷಿಣ ದಿಕ್ಕಿನ ಕಡೆಗೆ 65 ಅಡಿ ಜಮೀನನ್ನು ಸುಮಾರು ವರ್ಷಗಳ ಹಿಂದೆ ಶೆಡ್ ಹಾಕಿಕೊಳ್ಳಲು ಕೊಟ್ಟಿರುತ್ತಾರೆ. ದಾವಾ ಶೆಡ್ಯೂಲ್ ಇದರ ಚೆಕ್ ಬಂದಿ ಈ ಕೆಳಗಿನಂತೆ ಇರುತ್ತದೆಃ

1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟ ದಾವಾ ಶೆಡ್ಯುಲ್ ನ ಚೆಕ್ ಬಂದಿಃ

ಪೂರ್ವಃ ವಾದಿಗಳ ಉಳಿದ ಜಮೀನು

ಪಶ್ಚಿಮಃ ಪಾರ್ವತೆವ್ವ ಗಂಡ ಬಸವರಾಜ ವಾಲಿಕಾರ ಇವರ ಖಾಲಿ ಜಾಗೆ

ಉತ್ತರಃ ಗೌರಮ್ಮ ಗಂಡ ಅಮರಪ್ಪ ತೊನಸಿಹಾಳ ಮತ್ತು ಮುತ್ತಪ್ಪ ತಂದೆ ಸಂಗಪ್ಪ ಚೌಡಿ ಇವರುಗಳ ಜಾಗೆ

ದಕ್ಷಿಣಃ ಕಳಕಪ್ಪ ತಂದೆ ಮರಿಯಪ್ಪ ಬನ್ನಿಗೋಳ ಇವರ ಜಮೀನು

2 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟ ದಾವಾ ಶೆಡ್ಯುಲ್ ನ ಚೆಕ್ ಬಂದಿಃ

ಪೂರ್ವಃ ಮಲಿಯವ್ವ ಗಂಡ ಗುರಪ್ಪ ಉಪ್ಪನಾಳ ಇವರ ಖಾಲಿ ಜಾಗೆ

ಪಶ್ಚಿಮಃ ಹೊನ್ನಮ್ಮ ಗಂಡ ಹನಮಗೌಡ ಗೌಡ್ರು

ಉತ್ತರಃ ಶರಣಮ್ಮ ಗಂಡ ಶರಣಪ್ಪ ಬನ್ನಿಗೋಳ

ದಕ್ಷಿಣಃ ಕಳಕಪ್ಪ ತಂದೆ ಮರಿಯಪ್ಪ ಬನ್ನಿಗೋಳ ಇವರ ಜಮೀನು

ವಾದಿಯರು ತಮ್ಮ ಕುಟುಂಬದ ಅಡಚಣೆಗೋಸ್ಕರ ಬೇರೆ ಕಡೆ ದುಡಿಯಲು ಹೋದಾಗ, ಪ್ರತಿವಾದಿಯರು ವಾದಿಯರಿಗೆ ಗೊತ್ತಾಗದ ಹಾಗೆ ವಾದಿಯರು ಈ ಹಿಂದೆ ಪ್ರತಿವಾದಿಯರಿಗೆ ಬಿಟ್ಟು ಕೊಟ್ಟಿರುವ ಜಮೀನಿನ ಸ್ವಾಧೀನಕ್ಕಿಂತ ಹೆಚ್ಚಿನ ಜಮೀನನ್ನು ಅತೀ ಕ್ರಮಿಸಿಕೊಳ್ಳಲು ಈಗ ಪ್ರಯತ್ನಿಸಿರುತ್ತಾರೆ. ದಿನಾಂಕಃ **25.09.2024** ರಂದು ವಾದಿಯರು ದಾವಾ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವಾಗ ಪ್ರತಿವಾದಿಯರು ವಾದಿಯರ ಮಾಲೀಕತ್ವ ಮತ್ತು ಕಬ್ಜಾ ವಹಿವಾಟಿಗೆ ಹರಕತ್ತು ಮಾಡಿರುತ್ತಾರೆ, ಅಲ್ಲದೆ ವಾದಿಯರ ಹಕ್ಕನ್ನು ಅಲ್ಲಗಳೆದಿದ್ದರಿಂದ ವಾದಿಯರು ಪ್ರತಿವಾದಿಯರ ವಿರುದ್ದ ತನ್ನ ವಹಿವಾಟಿಗೆ ಪ್ರತಿವಾದಿಯರು ಅಡ್ಡಿ ಆತಂಕ ಉಂಟು ಮಾಡದಂತೆ ಶಾಶ್ವತ ನಿಷೇಧಾಜ್ಞೆ ಆದೇಶ ಮಾಡುವಂತೆ ಕೋರಿ ದಾವೆ ದಾಖಲಿಸುವ ಪ್ರಸಂಗ ಉಂಟಾಗಿರುತ್ತದೆ.

**3.** ದಾವಾ ಸಮನ್ಸನ್ನು ಪ್ರತಿವಾದಿಯರಿಗೆ ಜಾರಿ ಮಾಡಲಾಯಿತು. ಪ್ರತಿವಾದಿಯರು ತಮ್ಮ ವಕೀಲರ ಮುಖಾಂತರ ಹಾಜರಾಗಿ ತಮ್ಮ ವಿವರವಾದ ಪ್ರತಿವಾದ ಪತ್ರವನ್ನು ಹಾಗೂ ಎದುರು ಕ್ಲೈಮ್‌ನ್ನು ಸಲ್ಲಿಸಿರುತ್ತಾರೆ.

**4.** <u>ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದ ಪತ್ರ ಮತ್ತು ಎದುರು ಕ್ಲೇಮಿನ ಸಂಕ್ಷಿಪ್ತ ವಿವರ ಈ ಕೆಳಗಿನಂತಿರುತ್ತದೆ</u>**.**

ಪ್ರತಿವಾದ ಪತ್ರದಲ್ಲಿ, ವಾದಿಯರು ಸಲ್ಲಿಸಿದ ವಾದ ಪತ್ರದ ಅಂಶಗಳನ್ನು ಭಾಗಶಃ ಒಪ್ಪಿಕೊಂಡು ಭಾಗಶಃ ನಿರಾಕರಿಸಿರುತ್ತಾರೆ. ಕಾರಣ ಈ ದಾವೆಯು ಡಿಕ್ರಿ ಮಾಡಲು ಯೋಗ್ಯವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ಪ್ರತಿವಾದಿಯರು ಎದುರು ಕ್ಲೇಮ್ ನಲ್ಲಿ ದಾವಾ ಆಸ್ತಿಯಲ್ಲಿ ವಾದಿಯರು ಸದರಿ ದಾವಾ ಆಸ್ತಿಯಲ್ಲಿ **1** ನೇ ಪ್ರತಿವಾದಿಗೆ ಪೂರ್ವ-ಪಶ್ಚಿಮ 80 ಅಡಿ ಮತ್ತು ಉತ್ತರ-ದಕ್ಷಿಣ ದಿಕ್ಕಿನ ಕಡೆಗೆ 65 ಅಡಿ ಜಮೀನನ್ನು ಮತ್ತು **2** ನೇ ಪ್ರತಿವಾದಿಗೆ ಪೂರ್ವ-ಪಶ್ಚಿಮ 40 ಅಡಿ ಮತ್ತು ಉತ್ತರ-ದಕ್ಷಿಣ ದಿಕ್ಕಿನ ಕಡೆಗೆ 65 ಅಡಿ ಜಮೀನನ್ನು ಸುಮಾರು  ವರ್ಷಗಳ ಹಿಂದೆ ಶೆಡ್ ಹಾಕಿಕೊಳ್ಳಲು ಕೊಟ್ಟಿರುತ್ತಾರೆ. ದಾವಾ ಶೆಡ್ಯೂಲ್ ಇದರ ಚೆಕ್ ಬಂದಿ ಈ ಕೆಳಗಿನಂತೆ ಇರುತ್ತದೆಃ

1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟ ದಾವಾ ಶೆಡ್ಯುಲ್ ನ ಚೆಕ್ ಬಂದಿಃ

ಪೂರ್ವಃ ವಾದಿಗಳ ಉಳಿದ ಜಮೀನು

ಪಶ್ಚಿಮಃ ಪಾರ್ವತೆವ್ವ ಗಂಡ ಬಸವರಾಜ ವಾಲಿಕಾರ ಇವರ ಖಾಲಿ ಜಾಗೆ

ಉತ್ತರಃ ಗೌರಮ್ಮ ಗಂಡ ಅಮರಪ್ಪ ತೊನಸಿಹಾಳ ಮತ್ತು ಮುತ್ತಪ್ಪ ತಂದೆ ಸಂಗಪ್ಪ ಚೌಡಿ ಇವರುಗಳ ಜಾಗೆ

ದಕ್ಷಿಣಃ ಕಳಕಪ್ಪ ತಂದೆ ಮರಿಯಪ್ಪ ಬನ್ನಿಗೋಳ ಇವರ ಜಮೀನು

2 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟ ದಾವಾ ಶೆಡ್ಯುಲ್ ನ ಚೆಕ್ ಬಂದಿಃ

ಪೂರ್ವಃ ಮಲಿಯವ್ವ ಗಂಡ ಗುರಪ್ಪ ಉಪ್ಪನಾಳ ಇವರ ಖಾಲಿ ಜಾಗೆ

ಪಶ್ಚಿಮಃ ಹೊನ್ನಮ್ಮ ಗಂಡ ಹನಮಗೌಡ ಗೌಡ್ರು

ಉತ್ತರಃ ಶರಣಮ್ಮ ಗಂಡ ಶರಣಪ್ಪ ಬನ್ನಿಗೋಳ

ದಕ್ಷಿಣಃ ಕಳಕಪ್ಪ ತಂದೆ ಮರಿಯಪ್ಪ ಬನ್ನಿಗೋಳ ಇವರ ಜಮೀನು

ಈ ರೀತಿಯಾಗಿ ವಾದಿಯರು ಪ್ರತಿವಾದಿಗಳಿಗೆ ಬಿಟ್ಟುಕೊಟ್ಟಿರುತ್ತಾರೆ. ಈ ರೀತಿ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದು, ಈಗ ತಮ್ಮ ಕಬ್ಜೆಗೆ ವಾದಿಯರು ತೊಂದರೆ ಕೊಡುತ್ತಿದ್ದಾರೆ. ಆ ಕಾರಣ ವಾದಿಯರ ವಿರುದ್ಧ ನಿರಂತರ ಶಾಶ್ವತ ನಿಷೇಧಾಜ್ಞೆ ಆದೇಶ ಮಾಡಬೇಕೆಂದು ಪ್ರತಿವಾದಿಯರು ಎದುರು ಕ್ಲೇಮ್ ಕೇಳಿರುತ್ತಾರೆ. ವಾದಿಯರು ಪ್ರತಿವಾದಿಯರ ಕೇಳಿದ ಎದುರು ಕ್ಲೇಮ್‌ಗೆ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಈಗ ಪ್ರತಿವಾದಿಯರು ತಮ್ಮ ಹೆಸರನ್ನು ಕಂದಾಯ ಇಲಾಖೆಯಲ್ಲಿ ವರ್ಗಾವಣೆ ಮಾಡಿಸಿಕೊಡಲು ವಾದಿಯರನ್ನು ಕೇಳಿಕೊಂಡಾಗ, ವಾದಿಯರು ತಕರಾರು ಮಾಡಿರುತ್ತಾರೆ. ವಾದಿಯರು ಸುಳ್ಳು ಸಂಗತಿಗಳಿಂದ ಕೂಡಿದ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಎದುರು ಕ್ಲೇಮನ್ನು ಡಿಕ್ರಿಗೊಳಿಸಬೇಕೆಂದು ಪ್ರತಿವಾದಿಯರು ಕೇಳಿಕೊಂಡಿರುತ್ತಾರೆ.

**5.** ವಾದಪತ್ರ ಮತ್ತು ಪ್ರತಿವಾದ ಪತ್ರಗಳನ್ನು ಪರಿಶೀಲಿಸಿ ಈ ಕೆಳಕಂಡ ವಿವಾದಾಂಶಗಳನ್ನು ರಚಿಸಲಾಗಿರುತ್ತದೆ.

**ISSUES**

1. Whether the plaintiffs prove that they are in actual possession and enjoyment of the suit schedule property ?
2. Whether the plaintiffs prove the alleged interference by the defendants ?
3. Whether the defendants prove that they are in actual possession and enjoyment of the written statement schedule property ?
4. Whether the plaintiffs are entitled to the relief of permanent injunction ?
5. Whether the defendants are entitled to the relief of permanent injunction as claimed in the counter claim?

6. What order or decree?

**6.** ವಾದಿಯರು ತಮ್ಮ ಪ್ರಕರಣವನ್ನ ಸಾಬೀತು ಪಡಿಸಲು 2 ನೇ ವಾದಿಯು ತನ್ನನ್ನು ತಾನು ಪಿಡಬ್ಲ್ಯೂ**1** ಎಂದು ಪರೀಕ್ಷಿಸಿಕೊಂಡು ಎರಡು ದಾಖಲೆಗಳನ್ನು ನಿಪಿ.**1** ಮತ್ತು **2** ರಂತೆ ಗುರುತಿಸಿಕೊಂಡಿರುತ್ತಾರೆ. ಪ್ರತಿವಾದಿಯರು ತಮ್ಮನ್ನು ತಾವು ಡಿ.ಡಬ್ಲ್ಯೂ 1 ಮತ್ತು 2 ಎಂದು ಪರೀಕ್ಷಿಸಿಕೊಂಡಿದ್ದು, ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**7.** ಉಭಯತರ ವಾದ ವಿವಾದ ಕೇಳಿ, ಮೌಖಿಕ ಸಾಕ್ಷಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಈ ಮೇಲಿನ ವಿವಾದಾಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

| | |
|---|---|
| ವಿವಾದಾಂಶ**. 1** | ಸಕಾರಾತ್ಮಕವಾಗಿ |
| ವಿವಾದಾಂಶ**.2** | ಸಕಾರಾತ್ಮಕವಾಗಿ |
| ವಿವಾದಾಂಶ**.3** | ಸಕಾರಾತ್ಮಕವಾಗಿ |
| ವಿವಾದಾಂಶ**.4** | ಸಕಾರಾತ್ಮಕವಾಗಿ |
| ವಿವಾದಾಂಶ**.5** | ಸಕಾರಾತ್ಮಕವಾಗಿ |
| ವಿವಾದಾಂಶ**.6** | ಅಂತಿಮ ಆದೇಶದಂತೆ |

## ಕಾ ರ ಣ ಗ ಳು

**8.** ವಿವಾದಾಂಶ ನಂ**-1** ಮತ್ತು **3** ಃ ಸದರಿ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಚರ್ಚೆಯ ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಅವುಗಳನ್ನು ಏಕಕಾಲಕ್ಕೆ ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**9.** ನ್ಯಾಯಾಲಯವು ಈಗ ವಾದಿಯರು ದಾವಾ ಆಸ್ತಿಯಲ್ಲಿ ದಾವೆ ಹೂಡುವ ದಿನಾಂಕದಂದು ಸ್ವಾಧೀನತೆ ಹೊಂದಿರುತ್ತಾರೆಯೇ ಎಂದು ಪರಿಶೀಲಿಸಲು

ಮುಂದಾಗಿರುತ್ತದೆ. ವಾದಿಯರ ಪ್ರಕಾರ ದಾವಾ ಆಸ್ತಿಯು ವಾದಿಯರ ಹೆಸರಿನಲ್ಲಿ ಮುಂದುವರೆದಿರುತ್ತದೆ ಮತ್ತು ವಾದಿಯರು ಯಾರದು ತಂಟೆ ತಕರಾರು ಇಲ್ಲದೇ ವಹಿವಾಟು ಉಪಬೋಗ ಮಾಡುತ್ತಾ ಬಂದಿದ್ದು ಇರುತ್ತದೆ. ಸದರಿ ದಾವಾ ಆಸ್ತಿಯಲ್ಲಿ ಪ್ರತಿವಾದಿಯರಿಗೆ ವಾದಪತ್ರದಲ್ಲಿ ನಮೂದಿಸಿದಂತೆ, ಜಮೀನನ್ನು ಶೆಡ್ ಹಾಕಿಕೊಳ್ಳಲು ಬಿಟ್ಟುಕೊಟ್ಟಿದ್ದು, ಆದರೆ ವಾದಿಯರು ಊರಲ್ಲಿ ಇಲ್ಲದ ಸಮಯದಲ್ಲಿ ಪ್ರತಿವಾದಿಯರು ತಮಗೆ ಬಿಟ್ಟುಕೊಟ್ಟ ಜಮೀನಿಗಿಂತ ಹೆಚ್ಚಿನ ಜಮೀನನ್ನು ಅತೀಕ್ರಮಣ ಮಾಡಲು ಪ್ರಯತ್ನ ಮಾಡಿದ್ದರಿಂದ, ವಾದಿಯರು ಪ್ರತಿವಾದಿಯರ ವಿರುದ್ದ ಶಾಶ್ವತ ನಿರ್ಭಂಧಕಾಜ್ಞೆ ಕುರಿತು ದಾವೆ ಸಲ್ಲಿಸಿದ್ದು ಇರುತ್ತದೆ.

**10.** ಪ್ರತಿವಾದಿಯರು ವಾದ ಪತ್ರದ ಎಲ್ಲಾ ಸಂಗತಿಗಳನ್ನು ಒಪ್ಪಿಕೊಂಡು ತಾವು ಯಾವುದೇ ಅತೀಕ್ರಮಣ ಮಾಡಿಲ್ಲ ಎಂದು ಹೇಳಿಕೊಂಡಿದ್ದು ಮತ್ತು ತಾವು ಹೊಂದಿದ ಕಬ್ಜಾ ವಹಿವಾಟಿಗೆ ವಾದಿಯರಿಗೆ ತೊಂದರೆ ನೀಡದಂತೆ ಅವರ ವಿರುದ್ಧ ಶಾಶ್ವತ ನಿರ್ಭಂಧಕಾಜ್ಞೆಯ ಆದೇಶ ಮಾಡಬೇಕೆಂದು ಎದುರು ಕ್ಲೇಮ್ ಕೇಳಿಕೊಂಡಿರುತ್ತಾರೆ.

**11.** ವಾದಿಯರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಪಿ.ಡಬ್ಲ್ಯೂ:**1** ಎಂದು ಪರಿಕ್ಷೀಸಿಕೊಂಡು ನಿಪಿ:**1** ಮತ್ತು **2** ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಲ್ಲದೇ ತಮ್ಮ ಮುಖ್ಯ ವಿಚಾರಣೆ ಶಪಥ ಪತ್ರದಲ್ಲಿ ವಾದ ಪತ್ರದಲ್ಲಿ ಹೇಳಿದ ಅಂಶಗಳನ್ನು ಪುನರುಚ್ಚಿಸಿರುತ್ತಾರೆ. ಸದರಿ ಪಿ.ಡಬ್ಲ್ಯೂ.**1** ರವರನ್ನು ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲು ಮಾಡಿರುವುದಿಲ್ಲ. ವಾದಿಯರು ಹಾಜರುಪಡಿಸಿದ ನಿಪಿ:**1** ದಾಖಲೆಯಲ್ಲಿ **9** ನೇ ಪಟ್ಟಿಯನ್ನು ಅವಲೋಕಿಸಿದಾಗ ಸ್ವಾಧೀನದಾರರ ಸ್ಥಾನದಲ್ಲಿ ಕುಷ್ಟಗಿ ತಾಲೂಕು ಹನಮಸಾಗರ ಹೋಬಳಿಯ ತೋಪಲಕಟ್ಟಿ ಗ್ರಾಮದ ದಾವಾ ಆಸ್ತಿ ಸರ್ವೆ ನಂ.**53*** ಹಿಸ್ಸಾ-**1** ಕ್ಷೇತ್ರ **2** ಎರೆ **35** ಗುಂಟೆ **1** ಮತ್ತು **2** ನೇ

ವಾದಿಯರ ಹೆಸರಿನಲ್ಲಿ ಜಂಟೀಯಾಗಿ ದಾಖಲಾಗಿರುವುದು ಕಂಡುಬರುತ್ತದೆ. ಅದೇ ರೀತಿ ನಿ.ಪಿ-**2** ಮ್ಯುಟೇಶನ್ ರಿಜಿಸ್ಟರ್ ಪ್ರತಿ **MR.No.5,** ವಹಿವಾಟು ವರ್ಷ **2008-09** ನ್ನು ಅವಲೋಕಿಸಿದಾಗ, **1** ಮತ್ತು **2** ನೇ ವಾದಿಯರ ಹೆಸರಿನಲ್ಲಿ ಜಂಟಿಯಾಗಿ ಜಮೀನು ಹಕ್ಕು ಬದಲಾವಣೆ ಮಾಡಿರುವುದು ಕಂಡುಬಂದಿರುತ್ತದೆ. ಈ ರೀತಿ ಕಂದಾಯ ದಾಖಲೆಗಳಲ್ಲಿನ ನಮೂದನೆಗಳು ಎದುರು ಪಕ್ಷಗಾರರು ಸಾಬೀತು ಪಡೆಸುವವರೆಗೆ ಪಹಣಿ ಪತ್ರಿಕೆಯಲ್ಲಿರುವ ಅಂಶಗಳು ಕಾನೂನು ಬದ್ಧವಾಗಿ ನಮೂದಾಗಿರುತ್ತವೆ ಎಂದು ನ್ಯಾಯಾಲಯ ಪೂರ್ವ ಭಾವನೆ ಹೊಂದತಕ್ಕದ್ದು ಅಂತ ಕರ್ನಾಟಕ ಭೂ ಕಂದಾಯ ಅಧಿನಿಯಮ **1964** ಕಲಂ **133** ರಲ್ಲಿ ಸ್ಪಷ್ಟವಾಗಿ ಹೇಳಲಾಗಿರುತ್ತದೆ. ***Karnataka Land Revenue Act***

**section.133. Presumption regarding entries in the records.—An entry in the Record of Rights and a certified entry in the Register of Mutations or in the patta book shall be presumed to be true until the contrary is proved or a new entry is lawfully substituted therefor.** ಆದರೆ ಈ ಪೂರ್ವ ಭಾವನೆಯು ಖಂಡನಾತ್ಮಕ ಪೂರ್ವ ಭಾವನೆ ಆಗಿದ್ದು ಎದುರು ಪಕ್ಷಗಾರರು ಬಲವಾದ ಸಾಕ್ಷ್ಯಧಾರಗಳ ಮೂಲಕ ಈ ಪೂರ್ವ ಭಾವನೆಯನ್ನು ಖಂಡಿಸಬಹುದು ಆಗಿದ್ದರು ಸಹಿತ, ಪ್ರತಿವಾದಿಯರು ಈ ಪೂರ್ವಭಾವನೆಯನ್ನು ಖಂಡಿಸುವ ಪ್ರಯತ್ನವನ್ನು ಮಾಡಿರುವುದಿಲ್ಲ. ಆದ್ದರಿಂದ, ಪಿ.ಡಬ್ಲ್ಯೂ:**1** ರವರ ಸಾಕ್ಷ್ಯವನ್ನು ಅಲ್ಲಗಳೆಯುವಂತಹ ಯಾವುದೇ ಅಂಶಗಳನ್ನು ಎದುರು ಪಕ್ಷಗಾರರು ನ್ಯಾಯಾಲಯಕ್ಕೆ ತೋರಿಸಿಕೊಟ್ಟಿರುವುದಿಲ್ಲ. ಆ ಕಾರಣ ದಾವೆ ಹೂಡುವ ದಿನಾಂಕದಂದು ವಾದಿಯರು ದಾವಾ ಆಸ್ತಿಯ ಸ್ವಾಧೀನತೆ ಹೊಂದಿರುತ್ತಾರೆ ಎನ್ನುವುದನ್ನು ಸ್ಪಷ್ಟವಾಗಿ ರುಜುವಾತು ಪಡಿಸಿರುತ್ತಾರೆ.

**12.** ನಿರ್ಭಂಧಕಾಜ್ಞೆ ದಾವೆಯಲ್ಲಿ ವಾದಿಯರು ದಾವಾ ಸ್ವತ್ತಿನಲ್ಲಿ ದಾವೆ ಹೂಡುವ ದಿನದಂದು ಭೌತಿಕ ಸ್ವಾಧೀನದಲ್ಲಿ ಇರುವುದನ್ನು ಸಾಬೀತುಪಡಿಸಬೇಕಾಗುತ್ತದೆ ಮತ್ತು ಈ ರೀತಿ ದಾವೆಯಲ್ಲಿ ಮಾಲೀಕತ್ವದ ಪ್ರಶ್ನೆಯನ್ನು ನಿರ್ಧರಿಸುವುದು ಅವಶ್ಯಕತೆ ಇರುವುದಿಲ್ಲ ಎಂದು ಸರ್ವೋಚ್ಚ ನ್ಯಾಯಲಯವು ಈ ಕೆಳಗೆ ನಮೂದಿಸಿದ ಪ್ರಕರಣದಲ್ಲಿ ಸ್ಪಷ್ಟವಾಗಿ ಈ ಕೆಳಗಿನಂತೆ ಹೇಳಿರುತ್ತದೆ**. Anathula Sudhakar -Vs- P. Buchi Reddy (Dead) by LRS and Others, reported in (2008) 4 SCC 594,**

> **Wherein their lordships have held at para No.13.1 that where a plaintiff is in lawful or peaceful possession of a property and such possession is interfered or threatened by the defendant, a suit for an injunction simpliciter will lie. It is further held at para No.15 that, in a suit for permanent injunction to restrain the defendant from interfering with plaintiff's possession, the plaintiff will have to establish that as on the date of the suit he was in lawful possession of the suit property and defendant tried to interfere or disturb such lawful possession. Where the property is a building or building with appurtenant land, there may not be much difficulty in establishing possession. The plaintiff may prove physical or lawful possession, either of himself or by him through his family members or agents or lessees/licensees. Even in respect of a land without structures, as for example an agricultural land, possession may be established with reference to the actual use and cultivation. The question of title is not in issue in such a suit, though it may arise incidentally or collaterally.** ಅದೇ ರಿತಿ ಸರ್ವೊಚ್ಚ ನ್ಯಾಯಾಲಯವು**,** ಈ ಕೆಳಗಿನ ಪ್ರಕರಣದಲ್ಲಿ ಶಾಶ್ವತ ನಿರ್ಭಂಧಕಾಜ್ಞೆ ಪರಿಹಾರ ನೀಡಬೇಕಾದರೆ ವಾದಿಯರು ದಾವಾ ಹೂಡುವ ದಿನದಂದು ವಾದಿಯರು ಕಡ್ಡಾಯವಾಗಿ ದಾವಾ ಸ್ವತ್ತಿನ ಸ್ವಾಧಿನದಲ್ಲಿರಬೇಕು ಎಂದು ಹೇಳಿದೆ**. Balakrishan Rambhorse Gupta and Another, reported in 2019 SCC Online SC 135. Wherein their lordships have held that, possession of the plaintiff on the date of the suit is the must for grant of permanent injunction.** ಪ್ರಸ್ತುತ ದಾವೆಯಲ್ಲಿ ವಾದಿಯರು ದಾವಾ ಸ್ವತ್ತಿನ ಮಾಲಿಕತ್ವಕ್ಕೆ ಯಾವುದೇ ರೀತಿ ಪ್ರತಿವಾದಿಯಿಂದ ವಿವಾದವಿರುವುದಿಲ್ಲ**.**

ಆದ್ದರಿಂದ, ವಾದಿಯರು ದಾವೆ ಹೂಡಿದ ದಿನಾಂಕದಂದು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆಂದು ರುಜುವಾತುಪಡಿಸಿರುತ್ತಾರೆ.

**13.** ಈಗ ನ್ಯಾಯಲಯವು ಪ್ರತಿವಾದಿಯರು ಎದುರು ಕ್ಲೇಮಿನಲ್ಲಿ ಕೇಳಿಕೊಂಡಿರುವ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆಯೇ ಎಂದು ಪರಿಶೀಲಿಸಲು ಮುಂದಾಗಿರುತ್ತದೆ. ವಾದಿಯರು ವಾದಪತ್ರದಲ್ಲಿ ನಮೂದಿಸಿರುವಂತೆ ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ಜಾಗವನ್ನು ಬಿಟ್ಟುಕೊಟ್ಟಿರುತ್ತಾರೆ. ಈ ಸಂಗತಿಯನ್ನು ವಾದಿಯರು ವಾದಪತ್ರದಲ್ಲಿ ಒಪ್ಪಿಕೊಂಡಿರುತ್ತಾರೆ. ಈ ಒಪ್ಪಿಗೆಯು ನ್ಯಾಯಿಕ ಒಪ್ಪಿಗೆ ಆಗಿರುವುದರಿಂದ ಈ ಸಂಗತಿಯನ್ನು ಪ್ರತಿವಾದಿಯರಿಗೆ ಸಾಬಿತುಪಡಿಸುವ ಅವಶ್ಯಕತೆಯಿರುವುದಿಲ್ಲ.

**section 58 of Indian evidence act/53 of BSA Act.**

**Facts admitted need not be proved.**

**No fact need be proved in any proceeding which the parties thereto or their agents agree to admit at the hearing, or which, before the hearing, they agree to admit by any writing under their hands, or which by any rule or pleading in force at the time they are deemed to have admitted by their pleadings:**

**Provided that the Court may, in its discretion, require the facts admitted to be proved otherwise than by such admissions.** ಈ ಸಂಗತಿಯನ್ನು ರುಜುವಾತು ಪಡಿಸಲು, ಪ್ರತಿವಾದಿಯರು ಡಿ.ಡಬ್ಲ್ಯೂ.1 ಮತ್ತು ಡಿ.ಡಬ್ಲ್ಯೂ.2 ಎಂದು ಪರೀಕ್ಷಿಸಿಕೊಂಡು ಸಾಕ್ಷಿ ನುಡಿದಿರುತ್ತಾರೆ. ಪ್ರತಿವಾದಿಯರು ಈ ಮೇಲೆ ಹೇಳಿದಂತೆ ಕಬ್ಜಾ ಇರುವ ಬಗ್ಗೆ ವಾದಿಯರ ಪರ ವಕೀಲರು ಡಿಡಬ್ಲ್ಯೂ.1 ಮತ್ತು ಡಿ.ಡಬ್ಲ್ಯೂ.2 ರವರನ್ನು ಪಾಟೀ ಸವಾಲು ಮಾಡಿರುವುದಿಲ್ಲ. ಅದೇ ರೀತಿ ಕಬ್ಜಾ ಇರುವ ಬಗ್ಗೆ ವಾದಿಯರು ಒಪ್ಪಿಕೊಂಡಿರುತ್ತಾರೆ. ಅದೇ ರೀತಿ ವಾದಿಯರು ಪ್ರತಿವಾದಿಯರ ಎದುರು ಕ್ಲೇಮಿಗೆ

ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ. ಈ ಬಗ್ಗೆ ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 8 ನಿಯಮ 6 ಇ ಈ ಕೆಳಗಿನಂತೆ ಹೇಳಲಾಗಿರುತ್ತದೆ.

''ಸಿವಿಲ್ ಪ್ರಕ್ರೀಯಾ ಸಂಹಿತೆ ಕ್ರಮಾದೇಶ. **VIII** ನಿಯಮ **6** ಇ. ಎದುರು ಕ್ಲೇಮಿಗೆ ಉತ್ತರ ಕೊಡಲು ವಾದಿಯು ತಪ್ಪುವುದುಃ ಪ್ರತಿವಾದಿಯು ಮಾಡಿದ ಎದುರು ಕ್ಲೇಮಿಗೆ ಉತ್ತರವನ್ನು ಸಲ್ಲಿಸಲು ವಾದಿಯು ತಪ್ಪಿದರೆ, ವಾದಿಯ ವಿರುದ್ಧ ಮಾಡಲಾಗಿದ್ದ ಎದುರು ಕ್ಲೇಮಿನ ಸಂಬಂಧದಲ್ಲಿ ಅವನ ವಿರುದ್ಧವಾಗಿ ನ್ಯಾಯಾಲಯವು ತೀರ್ಪನ್ನು ಉಚ್ಚರಿಸಬಹುದು, ಅಥವಾ ಎದುರು ಕ್ಲೇಮಿನ ಸಂಬಂಧದಲ್ಲಿ ತಾನು ಸೂಕ್ತವೆಂದು ಆಲೋಚಿಸುವಂತ ಆದೇಶವನ್ನು ಮಾಡಬಹುದು''. ಆದ್ದರಿಂದ ಪ್ರತಿವಾದಿಯರು ದಾವೆ ಹೂಡಿದ ದಿನಾಂಕದಂದು ಎದುರು ಕ್ಲೇಮಿನ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆಂದು ರುಜುವಾತುಪಡಿಸಿರುತ್ತಾರೆ. ಆದ್ದರಿಂದ ವಿವಾದ ಅಂಶ **1** ಮತ್ತು **3** ನ್ನು ಸಕಾರಾತ್ಮಕ ಎಂದು ಉತ್ತರಿಸಲಾಗಿದೆ.

**14.** ವಿವಾದ ಅಂಶ **2**ಃ ಈಗ ನ್ಯಾಯಲಯವು ದಾವಾ ಆಸ್ತಿಯಲ್ಲಿ ಪ್ರತಿವಾದಿಗಳಿಂದ ಹಸ್ತಕ್ಷೇಪ ಉಂಟಾಗಿದೆಯೆಂದು ಅದೇ ರೀತಿ ಎದುರು ಕ್ಲೇಮಿನ ಆಸ್ತಿಯಲ್ಲಿ ವಾದಿಗಳಿಂದ ಹಸ್ತಕ್ಷೇಪ ಉಂಟಾಗಿದೆಯೇ ಎಂದು ಪರಿಶೀಲಿಸಲು ಮುಂದಾಗಿರುತ್ತದೆ. ದಾವಾ ಸ್ವತ್ತಿನ ಸ್ವಾಧೀನತೆ ಹಸ್ತಕ್ಷೇಪ ಸಂಬಂಧಿಸಿದಂತೆ ಪ್ರತಿವಾದಿಯರು ದಿನಾಂಕಃ **25.09.2024** ರಂದು ದಾವಾ ಸ್ವತ್ತಿನಲ್ಲಿ ಕಾನೂನು ಬಾಹಿರವಾಗಿ ಪ್ರವೇಶ ಮಾಡಿ ವಾದಿಯರು ಪ್ರತಿವಾದಿಯರಿಗೆ ಬಿಟ್ಟುಕೊಟ್ಟ ಕ್ಷೇತ್ರಕ್ಕಿಂತ ಹೆಚ್ಚಿನ ಕ್ಷೇತ್ರವನ್ನು ಅತೀಕ್ರಮಣ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ವಾದಿಯರ ಪರ ವಕೀಲರು ವಾದ ಮಂಡಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯರು, ವಾದಿಯರ ದಾವಾ ಸ್ವತ್ತಿನ ಸ್ವಾಧೀನಕ್ಕೆ ಯಾವುದೇ ರೀತಿ ಅಡ್ಡಿ, ಆತಂಕ, ಅಡಚಣೆ ಉಂಟು ಮಾಡಿರುವುದಿಲ್ಲ. ಆದರೆ ವಾದಿಯರು ಎದುರು ಕ್ಲೇಮಿನಲ್ಲಿ ತೋರಿಸಿದ ಪ್ರತಿವಾದಿಯರ ಸ್ವತ್ತಿನ ಸ್ವಾಧೀನಕ್ಕೆ ಹಸ್ತ ಕ್ಷೇಪ ಉಂಟು ಮಾಡುತ್ತಿದ್ದಾರೆಂದು ಪ್ರತಿವಾದಿಯರ ಪರ ವಕೀಲರು ವಾದ ಮಂಡಿಸಿರುತ್ತಾರೆ. ಈ ಮೇಲಿನ ವಾದಿಯರ ಮತ್ತು

ಪ್ರತಿವಾದಿಯರ ಸ್ವಾಧೀನ ಹಸ್ತಕ್ಷೇಪ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಪ್ರಕರಣವನ್ನು ಸೂಚಿಸುವುದು ಸೂಕ್ತವೆನಿಸುತ್ತದೆ.

> **Smt. Lakshmamma V/s M.P.Krishanappa and others, reported in 1991 (1) Kar. LJ 536, wherein their lordships have held at para No.3 that an aggrieved person comes to the Court complaining of interference of the defendant, may be at a particular point of time the defendant has not caused interference, but once the fear stands heavily in the mind of the aggrieved person, there shall be no difficulty for Court to grant injunction, especially when it is found that particular person is in possession.**

ತನ್ನ ವಾದ ಪತ್ರದಲ್ಲಿ ಪ್ರತಿವಾದಿಯರು ತನ್ನ ಸ್ವಾಧೀನತೆಗೆ ತೊಂದರೆಯುಂಟು ಮಾಡುತ್ತಿದ್ದಾರೆ ಅಂತ ಹೇಳಿಕೊಂಡಿದ್ದು, ಈ ಅಂಶಗಳನ್ನು ಅಲ್ಲಗಳೆಯುವಂತಹ ಯಾವುದೇ ಸಾಕ್ಷ್ಯವು ಪ್ರತಿವಾದಿಯರ ಕಡೆಯಿಂದ ಕಂಡು ಬಂದಿರುವುದಿಲ್ಲ. ಅದೆ ರೀತಿ ಪ್ರತಿವಾದಿಯರು ಎದುರು ಕ್ಲೇಮಿನ ಆಸ್ತಿಯಲ್ಲಿ ವಾದಿಯರ ತಮ್ಮ ಸ್ವಾಧೀನತೆಗೆ ತೊಂದರೆಯುಂಟು ಮಾಡುತ್ತಿದ್ದಾರೆ ಅಂತ ಹೇಳಿಕೊಂಡಿದ್ದು ಈ ಅಂಶಗಳನ್ನು ಅಲ್ಲಗಳೆಯುವಂತಹ ಯಾವುದೇ ಸಾಕ್ಷ್ಯವು ವಾದಿಯರ ಕಡೆಯಿಂದ ಕಂಡು ಬಂದಿರುವುದಿಲ್ಲ. ಈ ರೀತಿಯಾಗಿ ವಾದಿಯರ ಕ್ಲೇಮು ಮತ್ತು ಪ್ರತಿವಾದಿಯರ ಎದುರು ಕ್ಲೇಮು ದಾವಾ ಆಸ್ತಿಯಲ್ಲಿ ಪ್ರತಿವಾದಿಗಳಿಂದ ಹಸ್ತಕ್ಷೇಪ ಉಂಟಾಗಿದೆಯೆಂದು ಮತ್ತು ಎದುರು ಕ್ಲೇಮಿನ ಆಸ್ತಿಯಲ್ಲಿ ವಾದಿಗಳಿಂದ ಹಸ್ತಕ್ಷೇಪ ಉಂಟಾಗಿದೆಯೆಂದು ಕಂಡು ಬರುತ್ತದೆ. ಆದ್ದರಿಂದ ವಿವಾದಾಂಶ **2** ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**15.** <u>ವಿವಾದಾಂಶ **4** ಮತ್ತು **5**</u>ಃ ಈಗ ನ್ಯಾಯಲಯವು ವಾದಿಯರು ತಾವು ಕೋರಿರುವ ಪರಿಹಾರ ಪಡೆಯಲು ಅರ್ಹರೆ ಮತ್ತು ಅದೇ ರೀತಿ ಪ್ರತಿವಾದಿಯರು ತಾವು ಕೋರಿರುವ ಪರಿಹಾರ ಪಡೆಯಲು ಅರ್ಹರೆ ಎಂದು ಪರಿಶೀಲಿಸಲು ಮುಂದಾಗಿರುತ್ತದೆ. ನಿರ್ಧಿಷ್ಟ ಪರಿಹಾರ ಅಧಿನಿಯಮ ಕಲಂ**.38(3)-**ಯಾವಾಗ ಪ್ರತಿವಾದಿಯರು ವಾದಿಯರ ದಾವಾ ಸ್ವತ್ತಿನಲ್ಲಿ ಹಸ್ತಕ್ಷೇಪ ಮಾಡಿದಾಗ ಅಥವಾ ವಾದಿಯರ ಕಾನೂನು ಬದ್ದ ಹಕ್ಕಿಗೆ ಬೆದರಿಕೆ ಉಂಟು ಮಾಡಿದಾಗ ಅಥವಾ ದಾವಾ ಸ್ವತ್ತಿನ ಉಪಯೋಗಕ್ಕೆ ಅಡ್ಡಿ ಉಂಟು ಪಡಿಸಿದಾಗ ಕೆಳಗಿನ ಸಂದರ್ಭಗಳಲ್ಲಿ ಶಾಶ್ವತ ನಿರ್ಭಂದಕಾಜ್ಞೆ ಪರಿಹಾರ ನೀಡಬಹುದು.

**(a)** ವಾದಿಯರ ಸ್ವತ್ತಿಗೆ ಪ್ರತಿವಾದಿಯರು ನ್ಯಾಸಧಾರಿ ಇರುವಾಗ.

**(b)** ದಾವಾ ಸ್ವತ್ತಿನ ವಾದಿಯರಿಗೆ ಉಂಟಾಗುವ ನೈಜವಾದ ನಷ್ಟವನ್ನು ಅಳತೆ ಮಾಡುವಲ್ಲಿ ಸಾಧ್ಯವಿರದಿದ್ದಾಗ.

**(c)** ಹಸ್ತಕ್ಷೇಪದಿಂದ ಉಂಟಾಗುವ ನಷ್ಟವನ್ನು ಹಣದ ರೂಪದ ಪರಿಹಾರದಿಂದ ತುಂಬಿಕೊಡುವುದು ಸೂಕ್ತ ಎನಿಸದೆ ಇರುವಾಗ.

**(d)** ನ್ಯಾಯಲಯದ ಮುಂದೆ ಬಹು ವ್ಯವಹರಣೆಯ ಪ್ರಕ್ರಿಯೆಗಳನ್ನು ತಡೆಗಟ್ಟುವುದು.

ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರವು ನ್ಯಾಯಲಯದ ವಿವೇಚನಾ ಪರಿಹಾರವಾಗಿದ್ದು, ಪ್ರಸ್ತುತ ದಾವೆಯಲ್ಲಿ ವಾದಿಯರು ದಾವಾ ಹೂಡುವ ದಿನಾಂಕದಂದು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದು, ಪ್ರತಿವಾದಿಯರು ಹಸ್ತಕ್ಷೇಪ ಬೆದರಿಕೆ ಉಂಟು ಮಾಡುತ್ತಿದ್ದಾರೆ ಎನ್ನುವುದನ್ನು ಮತ್ತು ಅದಕ್ಕೆ ಪ್ರತಿಯಾಗಿ ಪ್ರತಿವಾದಿಯರು ತನ್ನ ಪ್ರತಿವಾದ ಪತ್ರದ ಎದುರು ಕ್ಲೇಮಿನ ಸ್ವತ್ತಿನ ಸ್ವಾಧೀನದಲ್ಲಿದ್ದು, ವಾದಿಯರು ಹಸ್ತಕ್ಷೇಪ ಬೆದರಿಕೆ ಉಂಟುಮಾಡುತ್ತಿದ್ದಾರೆ ಎಂದು ಉಭಯ ಪಕ್ಷಗಾರರು ಸಾಬೀತುಪಡಿಸಿದ್ದಾರೆ ಎಂದು ಈ ಮೇಲೆ ಚರ್ಚಿಸಿದ 1 ರಿಂದ 3 ನೇ ವಿವಾದಾಂಶಗಳಿಂದ ಹಾಗೂ ಕಡತದಲ್ಲಿರುವ ಮೌಖಿಕ ಹಾಗೂ ದಾಖಲೆಗಳ ಸಾಕ್ಷಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ನ್ಯಾಯಾಲಯಕ್ಕೆ

ಕಂಡುಬಂದಿರುತ್ತದೆ. **Mohammed Haji -V/s- Managing Director, NEKRTC Central Office, Kalburgi, reported in 2016 (4) KCCR 3369**, wherein their lordships have held at para No.6 that **once possession is proved, it has to be protected by means of granting injunction.** ಆದ್ದರಿಂದ ಉಭಯ ಪಕ್ಷಗಾರರು ತಾವು ಕೋರಿರುವ ಶಾಶ್ವತ ನಿರ್ಭಂಧಾಕಾಜ್ಞೆ ಪಡೆಯಲು ಅರ್ಹರಾಗಿರುತ್ತಾರೆ. ಆದ್ದರಿಂದ ವಿವಾದಾಂಶ **4** ಮತ್ತು **5** ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**16.** <u>ವಿವಾದ ಅಂಶ ನಂ**.6:-**</u> ವಿವಾದ ಅಂಶ 1 ರಿಂದ 5 ನ್ನು ವಿವರವಾಗಿ ಚರ್ಚಿಸಿದ ನಂತರ ಈ ಕೆಳಕಂಡಂತೆಃ

## ಆದೇಶ

ವಾದಿಯರ ದಾವೆಯನ್ನು ಮತ್ತು ಪ್ರತಿವಾದಿಯರ ಎದುರು ಕ್ಲೇಮನ್ನು ಡಿಕ್ರಿ ಮಾಡಲಾಗಿದೆ.

ದಾವಾ ಆಸ್ತಿಯಲ್ಲಿ, ವಾದಿಯರ ಸ್ವಾಧೀನದಲ್ಲಿರುವ ಜಮೀನಿನ ಕಬ್ಜಾ ಸ್ವಾಧೀನಕ್ಕೆ ಪ್ರತಿವಾದಿಗಳಾಗಲೀ ಅಥವಾ ಅವರ ತರ್ಫೆ ಯಾರೇ ಆಗಲಿ ಅಡ್ಡಿ-ಆತಂಕ ಉಂಟು ಮಾಡದಂತೆ ಪ್ರತಿವಾದಿಯರನ್ನು ಶಾಶ್ವತ ನಿರ್ಭಂಧಾಕಾಜ್ಞೆಯ ಮೂಲಕ ನಿರ್ಬಂಧಿಸಲಾಗಿದೆ.

ಎದುರು ಕ್ಲೇಮಿನ ಆಸ್ತಿಯಲ್ಲಿ ವಾದಿಯವರಾಗಲೀ ಅವರ ತರ್ಫೆ ಯಾರೇ ಆಗಲಿ ಯಾವುದೇ ರೀತಿ ಅಡ್ಡಿ-ಆತಂಕ ಉಂಟು ಮಾಡದಂತೆ ವಾದಿಯರನ್ನು ಶಾಶ್ವತ ನಿರ್ಭಂಧಕಾಜ್ಞೆಯ ಮೂಲಕ ನಿರ್ಬಂಧಿಸಲಾಗಿದೆ.

ಸದರಿ ದಾವೆಯಲ್ಲಿ ಯಾವುದಾದರೂ ಮಧ್ಯಂತರ ಅರ್ಜಿಗಳು ಬಾಕಿಯಿದ್ದರೆ ವಿಲೇವಾರಿಗೊಂಡಿರುತ್ತವೆ.

ತೀರ್ಪಿನಂತೆ ಡಿಕ್ರಿ ಬರೆಯತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಕಂಪ್ಯೂಟರಿನಲ್ಲಿ ನೇರವಾಗಿ ಉಕ್ತಲೇಖನ ಕೊಟ್ಟಿದ್ದು, ನಂತರದಲ್ಲಿ ತೀರ್ಪನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕಃ **01** ನೇ ಆಗಸ್ಟ್ **2026** ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

(ಮಹಾಂತೇಶ ಚೌಲಗಿ.)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕುಷ್ಟಗಿ

## ಅನುಬಂಧ

**1.** ವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ವಿವರಃ

| | |
|---|---|
| ಪಿಡಬ್ಲ್ಯೂ:1 | ಬಸವರಾಕ ತದದಿಸಿ ಶರಣಪ್ಪ ಬನ್ನಿಗೋಳ |

**2.** ವಾದಿಯರ ಪರ ಗುರುತಿಸಲಾದ ದಾಖಲೆಗಳ ವಿವರಃ

| | |
|---|---|
| ನಿಪಿ-1 | ಕೊಪ್ಪಳ ಜಿಲ್ಲೆಯ, ಕುಷ್ಟಗಿ ತಾಲೂಕಿನ ತೋಪಲಕಟ್ಟಿ ಗ್ರಾಮದ 2024-25 ನೇ ಸಾಲಿನ ಸರ್ವೆ ನಂ.53*ಹಿಸ್ಸಾ-1 ಒಟ್ಟು ವಿಸ್ತೀರ್ಣ 8 ಎಕರೆ 06 ಗುಂಟೆ ಜಮೀನು. |
| ನಿಪಿ-2 | ಮ್ಯುಟೇಶನ್ ರಜಿಸ್ಟರ್ ಪ್ರತಿ. |

**3.** ಪ್ರತಿವಾದಿ/ಯರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ವಿವರಃ

| | |
|---|---|
| ಡಿ.ಡಬ್ಲ್ಯೂ:1 | ಶ್ರೀಮತಿ.ಮಲಿಯವ್ವ ಗಂಡ ಗುರಪ್ಪ ಉಪ್ಪನಾಳ |
| ಡಿ.ಡಬ್ಲ್ಯೂ:2 | ಶ್ರೀಮತಿ.ಪಾರ್ವತೆವ್ವ ಗಂಡ ಬಸವರಾಜ ವಾಲಿಕಾರ |

**4.** ಪ್ರತಿವಾದಿ/ಯರ ಪರ ಗುರುತಿಸಲಾದ ದಾಖಲೆಗಳ ವಿವರಃ- -
ಇಲ್ಲ

MAHANTESH RAYAPPA CHOULAGI
Digitally signed by MAHANTESH RAYAPPA CHOULAGI Date: 2026.08.07 13:41:45 +0530

01.08.2026
(ಮಹಾಂತೇಶ ಚೌಲಗಿ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕುಷ್ಟಗಿ